**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.</u>**

**<u>Spl.C. 143/2020</u>**

**<u>P.W.-4</u>**
**<u>C.W.-4</u>**

ಹೆಸರು : ಎನ್.ಎನ್.ಬೋರೇಗೌಡ

ತಂದೆಯ ಹೆಸರು : ನಾಗರಾಜು

ವಯಸ್ಸು : 54 ವರ್ಷ

ಉದ್ಯೋಗ : ಪಂಚಾಯ್ತಿ ಅಭಿವೃದ್ದಿ ಅಧಿಕಾರಿ , ಬಯಲುಕುಪ್ಪೆ ಗ್ರಾಮಪಂಚಾಯ್ತಿ , ಪಿರಿಯಾಪಟ್ಟಣ ತಾಲ್ಲೂಕು , ಮೈಸೂರು

ವಾಸಸ್ಥಳ : ಬೈಲಕುಪ್ಪೆ

**<u>ದಿನಾಂಕಃ .12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –</u>**

ನಾನು 2017 ರಿಂದ ಆಗಸ್ಟ 2020 ರವರೆಗೆ ನಾನು ಮೈಸೂರು ತಾಲ್ಲೂಕು ಸಿದ್ದಲಿಂಗಪುರ ಗ್ರಾಮ ಪಂಚಾಯ್ತಿಯಲ್ಲಿ ಪಂಚಾಯ್ತಿ ಅಭಿವೃದ್ದಿ ಅಧಿಕಾರಿ , ಆಗಿ ಕರ್ತವ್ಯ ನ್ವಿಹಿಸುತ್ತಿದ್ದೆ.

2. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಆತ ಸಿದ್ದಲಿಂಗಪುರ ಗ್ರಾಮ ಪಂಚಾಯ್ತಿಯ ಕಾರ್ಯ ದರ್ಶಿಯಾಗಿ ಕೆಲಸ ನಿರ್ವಹಿಸುತ್ತಿದ್ದರು. ದಿಃ 06.09.2018 ರಂದು ನಾನು ಸಿದ್ದಲಿಂಗಪುರ ಗ್ರಾಮ ಪಂಚಾಯ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ , ನಾನು ಸದರಿ ಕಛೇರಿಯ ಮೊದಲನೇ ಮಹಡಿಯಲ್ಲಿದ್ದೆ. ಆಗ ಒಬ್ಬ ಪೋಲೀಸ್ ಸಿಬ್ಬಂದಿ ಬಂದು ನನ್ನನ್ನು ಕರೆದರು. ಆಗ ನಾನು ನೆಲ ಮಹಡಿಯಲ್ಲಿರುವ ಕಂಪ್ಯೂಟರ್ ಆಪರೇಟರ್ ರೂಂಗೆ ಹೋದೆ.

ಅಲ್ಲಿ ಆರೋಪಿ ಮತ್ತು ಎಸಿಬಿ ಅಧಿಕಾರಿ ಮತ್ತು ಸಿಬ್ಬಂದಿಗಳು ಇದ್ದರು. ಆಗ ತನಿಖಾಧಿಕಾರಿಯವರು ತಮ್ಮನ್ನು ಪರಿಚಯಿಸಿಕೊಂಡು , ಆರೋಪಿ ಗೊತ್ತಾ ಎಂದು ಕೇಳಿದರು. ನಾನು , ಹೌದು ಎಂದೆ. ಆಗ ಅವರು, ಆರೋಪಿ ಶೀಲಾವತಿ ಎನ್ನುವವರಿಂದ ರೂ.12,000/- ಲಂಚದ ಹಣವನ್ನು ಪಡೆದಿದ್ದಾರೆ , ಹೀಗಾಗಿ ಆತನನ್ನು ದಸ್ತಗಿರಿ ಮಾಡುತ್ತಿದ್ದೇವೆ ಎಂದು ವಿಷಯವನ್ನು ತಿಳಿಸಿದರು. ಅಲ್ಲಿ ಆರೋಪಿಯನ್ನು ವಿಚಾರಿಸುತ್ತಿದ್ದರು ಮತ್ತು ದಾಖಲಾತಿಗಳನ್ನು ಪರಿಶೀಲಿಸುತ್ತಿದ್ದರು. ಅರ್ಜಿದಾರರು ನೀಡಿದ್ದ ಅರ್ಜಿ ನಿಮ್ಮಲ್ಲಿದೆಯೇ ಎಂದು ಕೇಳಿದರು. ಆಗ ಆರೋಪಿ ಸದರಿ ಅರ್ಜಿ , ದಾಖಲಾತಿಗಳು ನನ್ನಲ್ಲಿಯೇ ಇವೆ ಎಂದು ಹೇಳಿ , ಒಳಗೆ ಹೋಗಿ ಬೀರುವಿನಿಂದ ಅವುಗಳನ್ನು ತಂದು ಹಾಜರುಪಡಿಸಿದರು. ನಾನು ಆ ದಾಖಲಾತಿಗಳನ್ನು ನೋಡಿ ಪರಿಶೀಲಿಸಿದೆ. ಅವುಗಳ ಜೆರಾಕ್ಸ್ ಪ್ರತಿಗಳನ್ನು ತೆಗೆದು ,ದೃಡೀಕರಿಸಿ ತನಿಖಾಧಿಕಾರಿಯವರಿಗೆ ನೀಡಿದೆ. ಈಗ ನೋಡುತ್ತಿರುವ ದಾಖಲಾತಿಗಳು ಅಂದು ನಾನು ದೃಡೀಕರಿಸಿ ಕೊಟ್ಟಂತಹ ದಾಖಲಾತಿಗಳಾಗಿವೆ. ಅವುಗಳು ದೋಷಾರೋಪಣೆ ಪಟ್ಟಿಯ ಪುಟ ಸಂಖ್ಯೆ 105 ರಿಂದ 214 ಪುಟಗಳಲ್ಲಿದ್ದು , ಅವುಗಳನ್ನು ಒಟ್ಟಾಗಿ ಈಗ ನಿಪಿ 22 ಎಂದು ಗುರುತುಪಡಿಸಿಕೊಳ್ಳಲಾಯಿತು. ಸದರಿ ದಾಖಲಾತಿಗಳ ಪ್ರತಿ ಪುಟಗಳ ಮೇಲೂ ನನ್ನ ಸಹಿ ಇರುತ್ತದೆ. ಸಾಕ್ಷಿ ತನ್ನ ಸಹಿಯನ್ನು ಪುಟ ಸಂಖ್ಯೆ 105 ರಿಂದ 214 ರವರೆಗೆ ಗುರುತಿಸಿರುತ್ತಾರೆ. ಪುಟ ಸಂಖ್ಯೆ 104 ರಲ್ಲಿ ಈಗಾಗಲೇ ನಿಡಿ 1 ಎಂದು ಗುರುತಿಸಲಾಗಿರುವ ದಾಖಲಾಯನ್ನು ಸಹ ನಾನೇ ದೃಡೀಕರಿಸಿಕೊಟ್ಟಿರುತ್ತೇನೆ.

3. ನಂತರ ಅಲ್ಲಿ ನಡೆದ ಪ್ರಕ್ರಿಯಗಳ ಬಾಬ್ತು ಮಹಜರ್ ಮಾಡಿದ್ದು , ಅದಕ್ಕೆ ನನ್ನ ಸಹಿಯನ್ನು ಪಡೆದರು. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ

20 ಎಂದು ಗುರುತುಪಡಿಸಿಕೊಳ್ಳಲಾಗಿದ್ದು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 20(ಡಿ) ಎಂದು ಗುರುತುಪಡಿಸಿಕೊಳ್ಳಲಾಯಿತು.

4. ನಂತರ ಅಲ್ಲಿ ಆರೋಪಿ ಮತ್ತು ಶೀಲಾವತಿಯವರ ಸಂಭಾಷಣೆಯನ್ನು ನನಗೆ ಕೇಳಿಸಿದರು. ಅದರಲ್ಲಿದ್ದ ಒಂದು ಧ್ವನಿ ಆರೋಪಿ ಮರಪ್ಪನ ಧ್ವನಿ ಎಂದು ನಾನು ಗುರುತಿಸಿದೆ. ಈ ಬಗ್ಗೆ ನಾನು ಪೋಲೀಸರ ಮುಂದೆ ದಿಃ 06.09.2018 ರಂದು ಹೇಳಿಕೆಯನ್ನು ನೀಡಿರುತ್ತೇನೆ. ತನಿಖಾಧಿಕಾರಿಯವರು ಆರೋಪಿಯನ್ನು ದಸ್ತಗಿರಿ ಮಾಡುವಾಗ ಆತನಿಗೆ ತಿಳುವಳಿಕೆ ಪತ್ರವನ್ನು ನೀಡಿರುತ್ತಾರೆ. ಅದನ್ನು ಈಗ ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಸದರಿ ನೋಟೀಸನ್ನು ನಿಪಿ 23 ಎಂತಲು ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 23(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ –**

5. ನಾನು ಮೊದಲ ಮಹಡಿಯಿಂದ ಪೋಲೀಸ್ ಸಿಬ್ಬಂದಿ ಬಂದು ಕರೆದಾಗ , ನೆಲ ಮಹಡಿಗೆ ಬಂದಾಗ, ಎಸಿಬಿ ಅಧಿಕಾರಿ ಮತ್ತು ಸಿಬ್ಬಂದಿಯವರು ಆರೋಪಿಯನ್ನು ಹಿಡಿದುಕೊಂಡು ಕುಳಿತಿದ್ದರು. ನಾನು ಎಸಿಬಿ ಅಧಿಕಾರಿ ಮತ್ತು ಸಿಬ್ಬಂದಿಯವರೊಂದಿಗೆ ಆ ದಿನ ಬೆಳಿಗ್ಗೆ 11.15 ರಿಂದ ಮಧ್ಯಾಹ್ನ 03.00 ಗಂಟೆವರೆಗೂ ಆ ಸ್ಥಳದಲ್ಲಿದ್ದೆ. ಅಲ್ಲಿ ನಡೆದ ಪ್ರಕ್ರಿಯಯ ಬಾಬ್ತು ನಾನು ಯಾವುದನ್ನು ಹೇಳಿ ಬರೆಯಿಸಿರುವುದಿಲ್ಲ. ಮಹಜರ್ ನಲ್ಲಿ ನಾನು ಆರೋಪಿಯ ಧ್ವನಿಯನ್ನು ಗುರುತಿಸಿದ ಬಾಬ್ತು ಸಂಬಂಧಪಟ್ಟ ಶಬ್ದ ಮತ್ತು ವಾಕ್ಯಗಳನ್ನು ನಮೂದಿಸಿರುತ್ತಾರೆ. ಈ ಬಗ್ಗೆ ಮಹಜರ್ ನಲ್ಲಿ ನಮೂದಿಸಿರದಿದ್ದರು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನಗೆ

ಧ್ವನಿಯನ್ನು ಗುರುತಿಸುವ ಪರಿಣಿತಿ ಆಗಿರುವುದಿಲ್ಲ. ನಾನು ಆ ಮೊದಲು ಆರೋಪಿಯ ಧ್ವನಿ ಮುದ್ರಿಕೆಯನ್ನು ಕೇಳಿರಲಿಲ್ಲ. ನಾನು ಯಾವುದೇ ಧ್ವನಿಯನ್ನು ಗುರುತಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

6. ನಮ್ಮ ಪಂಚಾಯ್ತಿಯಲ್ಲಿ ಯಾವುದೇ A, B, C ಖಾತೆಯನ್ನು ಮಾಡಿಕೊಡಬೇಕಾದರೆ ಸಂಬಂಧ ಪಟ್ಟ ವ್ಯಕ್ತಿಯಿಂದ ವಸೂಲು ಮಾಡಬೇಕಾದಂತಹ ಎಲ್ಲಾ ಫೀಗಳನ್ನು ವಸೂಲು ಮಾಡುತ್ತೇವೆ ಎನ್ನುವುದು ಸರಿ. ಆ ರೀತಿ ಹಣ ಕಾಸನ್ನು ವಸೂಲು ಮಾಡುವ ಕೆಲಸ ಗ್ರಾಮ ಪಂಚಾಯ್ತಿ ಕಾರ್ಯ ದರ್ಶಿಯವರದ್ದು ಎನ್ನುವುದು ಸರಿ. ಗ್ರಾಮ ಪಂಚಾಯ್ತಿಯಲ್ಲಿ ಕಾರ್ಯದರ್ಶಿಯವರ ಕರ್ತವ್ಯ ವೇನು , ಪಿಡಿಓ ರವರ ಕರ್ತವ್ಯಗಳೇನು ಎನ್ನುವ ಬಗ್ಗೆ ಸರ್ಕಾರದ ಸುತ್ತೋಲೆ ಇರುತ್ತದೆ ಎನ್ನುವುದು ಸರಿ . ಸರ್ಕಾರದ ಸುತ್ತೋಲೆಯ ಪ್ರಕಾರ ಖಾತೆ ಮಾಡುವ ಅಧಿಕಾರ ನನಗೆ ಮಾತ್ರ ಇರುತ್ತದೆ ಎನ್ನುವುದು ಸರಿ . ಒಂದು ಅರ್ಜಿ ಕಛೇರಿಗೆ ಬಂದಾಗ , ಅದನ್ನು ನನ್ನ ಸಿಬ್ಬಂದಿ ಪಡೆದು ಸಹಿ ಹಾಕಿ , ನಂತರ ನನ್ನ ಮುಂದೆ ತಂದು ಸಹಿ ಪಡೆದುಕೊಳ್ಳುತ್ತಾರೆ ಎನ್ನುವುದು ಸರಿ . ನಂತರ ಆ ಅರ್ಜಿಯನ್ನು , ಸರ್ಕಾರಕ್ಕೆ ಬರಬೇಕಾದಂತಹ ಕರಗಳಲ್ಲವನ್ನು ವಸೂಲಿ ಮಾಡಿಕೊಡಬೇಕು ಮತ್ತು ಸ್ಥಳ ಪರಿಶೀಲನೆ ಮಾಡಬೇಕು ಎಂದು ಕಾರ್ಯದರ್ಶಿಯವರಿಗೆ ನೀಡುತ್ತೇನೆ ಎನ್ನುವುದು ಸರಿ. ನಿಡಿ 1 ನ್ನು ನಾನು ದೂರುದಾರರಾದ ಶೀಲಾವತಿಯವರಿಂದ ದಿಃ 21.08.2018 ರಂದು ಪಡೆದಿರುತ್ತೇನೆ. ಅದಕ್ಕೂ ಮುಂಚೆ ಆಕೆ ಅರ್ಜಿಯನ್ನೇನು ನೀಡಿರುವುದಿಲ್ಲ. ಟ್ರಾಪ್ ಆಗುವ 16 ದಿನಗಳ ಮುಂಚೆಯೇ ಈ ಅರ್ಜಯನ್ನು ದೂರುದಾರರು ನೀಡಿದ್ದರು ಎನ್ನುವುದು ಸರಿ. ನಿಡಿ 2 ನ್ನು ಸಹ ನಾನೇ ನಮ್ಮ ಕಛೇರಿಯಲ್ಲಿ ಟ್ರಾಪ್ ಆದಾಗ ದೃಡೀಕರಿಸಿಕೊಟ್ಟಿರುತ್ತೇನೆ ಎನ್ನುವುದು ಸರಿ (ದೋಷಾರೋಪಣೆ ಪಟ್ಟಯಲ್ಲಿ

ಪುಟ ಸಂಖ್ಯೆ 185 ಆಗಿರುತ್ತದೆ). ಈ ನೋಟೀಸಿನಂತೆ ದೂರುದಾರರಿಂದ ರೂ.12,432/- ಬಾಕಿ ಬರುವುದು ಇದೆ ಎಂದು ನೀಡಿರುತ್ತಾರೆ ಎನ್ನುವುದು ಸರಿ . ಈ ನೋಟೀಸಿನಲ್ಲಿ ನೀರಿನ ಕರ ಸೇರಿರುವುದಿಲ್ಲ ಎನ್ನುವುದು ಸರಿ . ಈ ಕರಗಳನ್ನು ವಸೂಲು ಮಾಡದೇ ಆರೋಪಿ ಸಂಬಂಧಪಟ್ಟ ಕಡತವನ್ನು ನನ್ನ ಮುಂದೆ ಪುಟ್ ಅಪ್ ಮಾಡಲು ಬರುವುದಿಲ್ಲ ಎನ್ನುವುದು ಸರಿ .

7. ಎಸಿಬಿ ಸಿಬ್ಬಂದಿಯವರು ಈ ಆರೋಪಿಯಲ್ಲಿ ಅಷ್ಟು ಹಣ ಹೇಗೆ ಬಂತು ಎಂದು ಕೇಳಿದ್ದರು ಎನ್ನುವುದು ಸರಿ. ಅದು ಕಂದಾಯ ಬಾಕಿ ಎಂದು ಟ್ಯಾಕ್ಸ ಗಾಗಿ ಕೊಟ್ಟಿದ್ದಂತಹ ಹಣ ಎಂದು ತಮ್ಮ ಲಿಖಿತ ಸಮಜಾಯಿಶಿಯನ್ನು ನೀಡಿರುತ್ತಾರೆ ಎನ್ನುವುದು ಸರಿ . ದೋಷಾರೋಪಣೆ ಪಟ್ಟಿಯ ಪುಟ ಸಂಖ್ಯೆ 42 ರಲ್ಲಿ ಆರೋಪಿಯ ಸಹಿ ಇದೆ ಎನ್ನುವುದು ಸರಿ. ಅದನ್ನು ನಿಡಿ 6 ಎಂದು ಗುರುತುಪಡಿಸಿಕೊಳ್ಳಲಾಯಿತು. ಈಗ ನೋಡುತ್ತಿರುವ ದಾಖಲಾತಿ ಸರ್ಕಾರದ ಸುತ್ತೋಲೆ ಎನ್ನುವುದು ಸರಿ . ಅದು ಪುಟ ಸಂಖ್ಯೆ 196 ರಿಂದ 199 ರವರೆಗೆ ಇರುತ್ತದೆ. ಅದನ್ನು ನಿಡಿ 7 ಎಂದು ಗುರುತುಪಡಿಸಿಕೊಳ್ಳಲಾಯಿತು.

8. ಟ್ರ್ಯಾಪ್ ಆದ ನಂತರದಲ್ಲಿ ಆರೋಪಿ ಆರ್ ಟಿ ಐ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ಕೆಲವೊಂದು ದಾಖಲಾತಿಗಳನ್ನು ಪಡೆದುಕೊಂಡಿರುತ್ತಾರೆ ಎನ್ನುವುದು ಸರಿ. ಈಗ ತೋರಿಸುತ್ತಿರುವ ದಾಖಲಾತಿ ದಿಃ 05.04.2019 ರಂತೆ ನಾನು ನೀಡಿದ ಕವರಿಂಗ್ ಲೆಟರ್ ಎನ್ನುವುದು ಸರಿ. ಅದನ್ನು ನಿಡಿ 8 ಎಂದು ಗುರುತುಪಡಿಸಿಕೊಳ್ಳಲಾಯಿತು. ಈಗ ನೋಡುತ್ತಿರುವ ದಾಖಾತಿ ನಿಡಿ 2 ರ ದೃಡೀಕೃತ ನಕಲು ಎನ್ನುವುದು ಸರಿ . ಈಗ ನೋಡುತ್ತಿರುವ ದಾಖಲಾತಿ ನೀರಿನ ತೆರಿಗೆ ಎಷ್ಟು ಬಾಕಿ ಇರುತ್ತದೆ ಎನ್ನುವ ಬಗ್ಗೆ ನೀಡಿದ ದೃಡೀಕರಣ ಪತ್ರ ಎನ್ನುವುದು ಸರಿ . ಅದನ್ನು ನಿಡಿ 9 ಎಂದು ಗುರುತುಪಡಿಸಿಕೊಳ್ಳಲಾಯಿತು. ಈಗ ನೋಡುತ್ತಿರುವ

ದಾಖಲಾತಿ ದಿಃ 13.11.2018 ಕ್ಕೆ ಒಟ್ಟು ಮನೆ ತೆರಿಗೆ ಬಾಕಿ ಎಷ್ಟು ಇದೆ ಎನ್ನುವ ಬಾಬ್ತು ನೀಡಿದ ದೃಡೀಕರಣ ಪತ್ರ ಎನ್ನುವುದು ಸರಿ . ಅದನ್ನು ನಿಡಿ 10 ಎಂದು ಗುರುತುಪಡಿಸಿಕೊಳ್ಳಲಾಯಿತು. ಈಗ ನೋಡುತ್ತಿರುವ ದಾಖಲಾತಿ ದೂರುದಾರರ ಸ್ವತ್ತಿನ ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ ಟ್ರಾಕ್ಟ ಆಗಿರುತ್ತದೆ. ಅದನ್ನು ನಿಡಿ 11 ಎಂದು ಗುರುತುಪಡಿಸಿಕೊಳ್ಳಲಾಯಿತು. ಈಗ ನೋಡುತ್ತಿರುವ ದಾಖಾತಿ ದಿಃ 06.06.2023 ರಂದು ನಾನು ಶಿಸ್ತು ಪ್ರಕರಣ ಸಂಖ್ಯೆ ಡಿ.ಎ.ಇ.ಇ.(2)ಸಿಸಿಎ/07–2018–19/17269 ನೀಡಿದ ಮೌಖಿಕ ಸಾಕ್ಷ್ಯ ಎನ್ನುವುದು ಸರಿ . ಅದನ್ನು ನಿಡಿ 12 ಎಂದು ಗುರುತುಪಡಿಸಿಕೊಳ್ಳಲಾಯಿತು. ಈ ದಾಖಲಾತಿಗಳನ್ನು ಪರಿಶೀಲಿಸಿದಾಗ ಆರೋಪಿ ದೂರುದಾರರರಿಂದ ಬಾಕಿ ಕಂದಾಯವನ್ನು ವಸೂಲಿ ಮಾಡಿರುತ್ತಾರೆ ಎಂದು ಮಾಡಿದ ಸಲಹೆಗೆ ಸಾಕ್ಷಿ , ಆತ ಆ ಹಣವನ್ನು ಏನೆಂದು ವಸೂಲಿ ಮಾಡಿದ್ದ ಎನ್ನುವುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಡಿ 12 ಇಲಾಖಾ ವಿಚಾರಣಾ ಕಾಲದಲ್ಲಿ ಏನು ನಡೆದಿರುತ್ತದೆ ಎನ್ನುವ ಬಗ್ಗೆ ನಾನು ಸಾಕ್ಷ್ಯ ನುಡಿದಿದ್ದೇನೆ ಎನ್ನುವುದು ಸರಿ. ಆರೋಪಿ ದೂರುದಾರರಿಂದ ಪಡೆದ ಹಣ ಬಾಕಿ ಕಂದಾಯದ ಹಣ ಎಂದು ಗೊತ್ತಿದ್ದರು ಸಹ ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಓ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.